## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಅಫಜಲಪೂರ

## ಸಿಸಿ ನಂ. **156/2020**

ಚಾಸಾ-1 ಫ್ರಾಸಾ-3

ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣಿಕೃತ ಹೇಳಿಕೆ
ಪಡೆದುಕೊಳ್ಳಲಾಯಿತು.
ದಿನಾಂಕ: 05-07-2025

| | | |
|---|---|---|
| ಹೆಸರು | : | ಮೋದಿನ ಸಾಬ |
| ತಂದೆಯ ಹೆಸರು | : | ಮೆಹಬೂಬ ಸಾಬ |
| ವಯಸ್ಸು | : | 39 ವರ್ಷ |
| ಉದ್ಯೋಗ | : | ಗ್ರಾಮ ಲೆಕ್ಕಆಡಳಿತಾಧಿಕಾರಿ |
| ವಾಸಸ್ಥಳ | : | ಅಫಜಲಪೂರ |

-: ಮುಖ್ಯ ವಿಚಾರಣೆ :- ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :-

2010 ರಿಂದ 2020 ರವರೆಗೆ ಕರಜಗಿ ಹೋಬಳಿಯಲ್ಲಿ ಪ್ರಭಾರಿ ಕಂದಾಯ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ತಹಶೀಲ್ದಾರ ಅಫಜಲಪೂರ ರವರು 4 ನೇ ತಾರೀಖಿನಂದು ಫೋನ ಮಾಡಿ ಅನಧಿಕೃತವಾಗಿ ಮರಳು ಸಾಗಾಟ ಮಾಡುತ್ತಿದ್ದಾರೆ ಎಂದು ತಿಳಿಸಿರುತ್ತಾರೆ ಅದರಂತೆ ನಾವು ಗ್ರಾಮ ಲೆಕ್ಕಾಧಿಕಾರಿ ಮತ್ತು ಗ್ರಾಮ ಸೇವಕ ಶಿವಪೂರು ನಾವೆಲ್ಲಾ ಜಂಟಿಯಾಗಿ ಗಸ್ತು ಕರ್ತವ್ಯದಲ್ಲಿದ್ದಾಗ ಒಂದು ಮರಳು ತುಂಬಿಕೊಂಡ ಟ್ರಾಕ್ಟರ ಹೋಗುತ್ತಿದ್ದು ಸದರಿ ಟ್ರಾಕ್ಟರನ್ನು ಕೈ ಮಾಡಿ ನಿಲ್ಲಿಸಿದಾಗ ಸದರಿ ಟ್ರಾಕ್ಟರಿನ ಚಾಲಕನು ಟ್ರಾಕ್ಟರನ್ನು ನಿಲ್ಲಿಸಿ ಓಡಿ ಹೋಗಿರುತ್ತಾನೆ. ತದನಂತರ ನಾನು ಗ್ರಾಮ ಲೆಕ್ಕಾಧಿಕಾರಿ ಮತ್ತು ಗ್ರಾಮ ಸೇವಕ ಎಲ್ಲರೂ ಸೇರಿ ಪಂಚನಾಮೆಯನ್ನು ಬರೆದಿರುತ್ತೇವೆ. ತದನಂತರ ಮಾಷಾಳದ ಹೊರವಲಯ ಪೋಲಿಸ ಠಾಣೆಗೆ ಸದರಿ ಟ್ರಾಕ್ಟರನ್ನು ಪೋಲಿಸರ ವಶಕ್ಕೆ ನೀಡಿ ದಿನಾಂಕಃ 05-12-2019 ರಂದು ಪೋಲಿಸ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ದಿನಾಂಕಃ 16-01-2020 ರಂದು ಟ್ರಾಕ್ಟರನ ಮಾಲಕನು ನ್ಯಾಯಾಲಯದ ಆದೇಶ ಪಡೆದು ಒಬ್ಬ ಜಾಮೀನುದಾರನೊಂದಿಗೆ ಟ್ರಾಕ್ಟರ

ಬಿಡಿಸಲು ಬಂದಾಗ ಸದರಿ ಟ್ರಾಕ್ಟರನ ಮಾಲಕನನ್ನು ನೋಡಿ ಗುರುತಿಸಿರುತ್ತೇನೆ.

ಸಾಕ್ಷಿಗೆ ಜಪ್ತಿ ಪಂಚನಾಮೆಯ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ-**1** ಎಂದು ಗುರುತಿಸಲಾಗಿದ್ದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**1**(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ದೂರಿನ ಪ್ರತಿಯನ್ನು ತೋರಿಸಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-**6** ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-**6**(ಎ) ಎಂದು ಗುರುತಿಸಲಾಯಿತು.

ಜಪ್ತಿ ಪಡಿಸಿಕೊಂಡಿದ್ದಾರೆ ಎಂದು ಹೇಳುವ ಭಾವಚಿತ್ರಗಳನ್ನು ಸಾಕ್ಷಿಗೆ ತೋರಿಸಿದ್ದು ಸಾಕ್ಷಿ ಅವುಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ **2** ರಿಂದ **5** ಎಂದು ಗುರುತಿಸಲಾಗಿದೆ.

ನ್ಯಾಯಾಲಯದ ಮುಂದೆ ಹಾಜರಿರುವ ಆರೋಪಿತನನ್ನು ನೋಡಿ ಸಾಕ್ಷಿಯು ಗುರುತಿಸುತ್ತಾರೆ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ **SSP** ವಕೀಲರಿಂದಃ-</u>

ನಮಗೆ ತಹಶೀಲ್ದಾರ ಅಫಜಲಪೂರ ರವರು 9 ಗಂಟೆಗೆ ಮಾಹಿತಿ ನೀಡಿರುತ್ತಾರೆ. ನಾವು ಕರಜಗಿಯಿಂದ ಮಣೂರಿಗೆ ಹೋಗುತ್ತಿರುವಾಗ ಶಿವೂರು ಕ್ರಾಸ ಹತ್ತಿರ ಟ್ರಾಕ್ಟರ ದೊರೆತಿರುತ್ತದೆ. ನಾವು ಕರಜಗಿ ಗ್ರಾಮದಲ್ಲಿ ಬೆಳಿಗ್ಗೆ 10-30 ರವರೆಗೆ ಇದ್ದೇವೆ. ಕರಜಗಿಯಿಂದ ಶಿವೂರು ಕ್ರಾಸ 5 ಕಿ.ಮಿ. ಅಂತರದಲಿದೆ. ಶಿವೂರು ಕ್ರಾಸ ಹತ್ತಿರ ಧಾಬಾ ಅಂಗಡಿಗಳು ಇಲ್ಲ. ಶಿವೂರು ಕ್ರಾಸಿದಲ್ಲಿರುವ ಬಸ ನಿಲ್ದಾಣ ಉತ್ತರಕ್ಕೆ ಮುಖಮಾಡಿದೆ. ನಾವು ಗಸ್ತು ಹೋದಾಗ ಪಂಚನಾಮೆ ಬರೆದಿರುತ್ತೇವೆ. ನಿಪಿ 1 ರಲ್ಲಿ 5-12-2019 ಎಂದು ಬರೆಯಲಾಗಿದೆ ಎಂದರೆ ಸಾಕ್ಷಿಯೂ 4 ನೇ ತಾರೀಖು ಪಂಚನಾಮೆ ಬರೆದಿದ್ದು ಸದರಿ ಪಂಚನಾಮೆ ಬರೆಯುವಾಗ ಸಮಯ 0-30 ನಿಮಿಷ ಆಗಿತ್ತು ಆದ್ದರಿಂದ ತಾರೀಖು 5 ಎಂದು ಬರೆಯಲಾಗಿದೆ ಎಂದು ನುಡಿಯುತ್ತಾರೆ. ನಾನು ಈ ರೀತಿ ಪಂಚನಾಮೆಯಲ್ಲಿ ಬರೆದಿರುವುದಿಲ್ಲ. ಓಡಿ ಹೋದ ವ್ಯಕ್ತಿ ಯಾರು ಎಂದು ಗೊತ್ತಾಗಿರುವುದಿಲ್ಲ. ನಾವು ಜಪ್ತಿ ಪಡಿಸಿಕೊಳ್ಳುವ ಸಮಯದಲ್ಲಿ ಟ್ರಾಕ್ಟರನ ಭಾವಚಿತ್ರವನ್ನು ತೆಗೆದುಕೊಂಡಿಲ್ಲ. ನಾವು ಕತ್ತಲಲ್ಲಿ ಪಂಚನಾಮೆ ಬರೆದಿಲ್ಲ ಎಂದರೆ ಸರಿಯಲ್ಲ. ನಾವು ಮಾಷಾಳದ ಹೊರವಲಯ ಪೋಲಿಸ ಠಾಣೆಗೆ ಟ್ರಾಕ್ಟರನ್ನು ಪೋಲಿಸರ ವಶಕ್ಕೆ ನೀಡಿದ ಸಮಯ 2 ರಿಂದ 2-30 ಆಗಿತ್ತು. ನಾವು ಹೊರವಲಯ

ಪೋಲಿಸ ಠಾಣೆಯಲ್ಲಿ ವರದಿಯನ್ನು ನೀಡಿರುವುದಿಲ್ಲ. ಕಚೇರಿಯ ಅಂಕಿ ಅಂಶ ಗೋಸ್ಕರ ಆರೋಪಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ - ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ. ದಂಡಾಧಿಕಾರಿಗಳು
ಅಫಜಲಪೂರ